# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1012 |
| ಉತ್ತರಿಸಬೇಕಾದ ದಿನಾಂಕ | : | 24.02.2023. |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು. |

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ) | ರಾಷ್ಟ್ರೀಯ ಹಾಗೂ ರಾಜ್ಯ ಕ್ರೀಡಾ ನೀತಿಯ ಕುರಿತು ಮಾಹಿತಿ ಒದಗಿಸುವುದು | ರಾಷ್ಟ್ರೀಯ ಕ್ರೀಡಾ ನೀತಿಯನ್ನು ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಇಲಾಖೆಯು ರೂಪಿಸಿದ್ದು, ಕ್ರೀಡೆಯ ಸಾರ್ವತ್ರೀಕರಣ (Universalization of Sports) ಮತ್ತು ಕ್ರೀಡೆಯಲ್ಲಿ ಶ್ರೇಷ್ಠತೆಯ ಉತ್ತೇಜನ (Promotion of Excellence in Sports) ಉದ್ದೇಶ ಹೊಂದಿದೆ. ಕ್ರೀಡಾ ಮೂಲಸೌಕರ್ಯಗಳ ಉನ್ನತೀಕರಣ, ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ ಬೆಂಬಲ, ಕ್ರೀಡೆಯ ಉತ್ತೇಜನಕ್ಕಾಗಿ ಪ್ರೋತ್ಸಾಹಕ ಕ್ರಮಗಳು, ಕ್ರೀಡೆಯ ಬೆಳವಣಿಗೆಗೆ ವೈಜ್ಞಾನಿಕ ಬೆಂಬಲ, ಮಹಿಳೆಯರು, ಪರಿಶಿಷ್ಟ ಪಂಗಡಕ್ಕೆ ಸೇರಿದವರು ಹಾಗೂ ಗ್ರಾಮೀಣ ಯುವಜನರ ಕ್ರೀಡಾ ಭಾಗವಹಿಸುವುದಕ್ಕೆ ಹೆಚ್ಚಿಸುವುದು, ವಾಣಿಜ್ಯ ಸಂಸ್ಥೆಗಳನ್ನು ಕ್ರೀಡಾ ಬೆಳವಣಿಗೆಯಲ್ಲಿ ಪಾಲುದಾರರಾಗಲು ಉತ್ತೇಜಿಸುವುದು, ಸಾರ್ವಜನಿಕರಲ್ಲಿ ಕ್ರೀಡಾ ಮನೋಭಾವ ಉತ್ತೇಜಿಸಲು ಕ್ರಮಗಳು ರಾಷ್ಟ್ರೀಯ ಕ್ರೀಡಾ ನೀತಿಯ ಪ್ರಮುಖ ಅಂಶಗಳಾಗಿವೆ.<br><br>ಕರ್ನಾಟಕ ರಾಜ್ಯ ಕ್ರೀಡಾ ನೀತಿ-2018 ರಲ್ಲಿ ಆಡಳಿತ ಮತ್ತು ಸಂಸ್ಥೆಗಳು, ಕ್ರೀಡಾ ಪರಿಸರ ವ್ಯವಸ್ಥೆ, ಭೌತಿಕ ಕ್ರೀಡಾ ಮೂಲಸೌಕರ್ಯಗಳು ಮತ್ತು ಮಾನವಿಕ ಸೌಲಭ್ಯಗಳ ಕ್ಷೇತ್ರದಲ್ಲಿ ಅಗತ್ಯ ಬದಲಾವಣೆಗಳನ್ನು ಹಾಗೂ ಉನ್ನತೀಕರಣವನ್ನು ಪ್ರಸ್ತಾಪಿಸಲಾಗಿದೆ. |
| ಆ) | ಕರ್ನಾಟಕ ಒಲಿಂಪಿಕ್ ಅಸೋಸಿಯೇಷನ್ ಸೊಸೈಟಿ ನೋಂದಣಿ ಸಂರಚನೆ ಪದಾಧಿಕಾರಿಗಳ ಸಂಸ್ಥೆಗೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪದಾಧಿಕಾರಿಗಳು ಇದ್ದಾರೆಯೇ (ವಿವರ ನೀಡುವುದು) | ಕರ್ನಾಟಕ ಒಲಿಂಪಿಕ್ ಸಂಸ್ಥೆಯು ಕರ್ನಾಟಕ ಸಂಘಗಳ ನೋಂದಾವಣೆ ಕಾಯ್ದೆ 1960 ರಡಿ ನೋಂದಾಯಿತ ಸಂಸ್ಥೆಯಾಗಿದ್ದು, ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಪದಾಧಿಕಾರಿಗಳನ್ನು ಹೊಂದಿದ್ದು, ಜಿಲ್ಲೆಗಳಲ್ಲಿ ಪದಾಧಿಕಾರಿಗಳನ್ನು ಹೊಂದಿರುವುದಿಲ್ಲ. ಜಿಲ್ಲಾ ಕೇಂದ್ರಗಳಲ್ಲಿ ಸಂಸ್ಥೆಯ ಸದಸ್ಯತ್ವವನ್ನು ಬಯಸಿ, ಅರ್ಜಿ ಸಲ್ಲಿಸುವವರು ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಬೈಲಾ ಅನುಸಾರ ಸದಸ್ಯತ್ವ ಕೋರಬಹುದಾಗಿದೆ. |
| ಇ) | ಕರ್ನಾಟಕ ಮಿನಿ ಒಲಿಂಪಿಕ್ಸ್ ಗೆ ಬಿಡುಗಡೆಯಾದ ಅನುದಾನ ಎಷ್ಟು; ಬಿಡುಗಡೆಯಾದ ಅನುದಾನ ಸಮರ್ಪಕವಾಗಿ ಬಳಕೆಯಾಗಿದೆಯೇ; (ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ಮಿನಿ ಒಲಿಂಪಿಕ್ಸ್ ಆಯೋಜನೆಗೆ ಒಟ್ಟು ರೂ 2,80,95,850/- ಮೊತ್ತ ಬಿಡುಗಡೆಯಾಗಿರುತ್ತದೆ.<br><br>ಮಿನಿ ಒಲಿಂಪಿಕ್ಸ್ ಕ್ರೀಡಾಕೂಟವನ್ನು ದಿನಾಂಕ: 16-05-2022 ರಿಂದ 22-05-2022 ರವರೆಗೆ ಬೆಂಗಳೂರಿನಲ್ಲಿ ಯಶಸ್ವಿಯಾಗಿ ಆಯೋಜಿಸಲಾಗಿದ್ದು, 21 ವಿವಿಧ ಕ್ರೀಡೆಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿರುತ್ತದೆ. ಈ ಕ್ರೀಡಾಕೂಟದಲ್ಲಿ 3,100 ಕ್ರೀಡಾಪಟುಗಳು ಹಾಗೂ 400 ತಾಂತ್ರಿಕ ಸಿಬ್ಬಂದಿಗಳು ಭಾಗವಹಿಸಿರುತ್ತಾರೆ. ಮೊದಲ ಹಂತದಲ್ಲಿ ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ/ಇಪಿಇ/34/2021, ಬೆಂಗಳೂರು, ದಿನಾಂಕ: 21-01-2022 ರನ್ವಯ ರೂ 250.00 ಲಕ್ಷಗಳನ್ನು ಮಂಜೂರು ಮಾಡಲಾಗಿರುತ್ತದೆ. ಎರಡನೇ ಹಂತದಲ್ಲಿ ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ 34 ಇಪಿಇ 2021, ಬೆಂಗಳೂರು, ದಿನಾಂಕ: 22-12-2022 ರನ್ವಯ |

| | | |
|---|---|---|
| | | ರೂ 30,95,850/- ಗಳನ್ನು ಮಂಜೂರು ಮಾಡಲಾಗಿರುತ್ತದೆ. ಸದರಿ ಮೊತ್ತದಲ್ಲಿ ಕ್ರೀಡಾಪಟುಗಳ ವಸತಿ, ಊಟೋಪಹಾರ, ಸಾರಿಗೆ, ಸಮವಸ್ತ್ರ, ಕ್ರೀಡಾ ಉಪಕರಣಗಳು, ಮೆಡಲ್, ಟ್ರೋಫಿ, ಉದ್ಘಾಟನಾ ಹಾಗೂ ಸಮಾರೋಪ ಸಮಾರಂಭಗಳ ಆಯೋಜನೆ ವೆಚ್ಚಗಳನ್ನು ಭರಿಸಲಾಗಿದ್ದು, ಅನುದಾನ ಸಮರ್ಪಕವಾಗಿ ಬಳಕೆಯಾಗಿರುತ್ತದೆ. ಪ್ರಸ್ತುತ, ಕ್ರೀಡಾಪಟುಗಳಿಗೆ ಪ್ರಯಾಣ ಭತ್ಯೆ ಬಾಬ್ತು ರೂ 22,32,800/- ಗಳನ್ನು ಕ್ರೀಡಾಪಟುಗಳ ಖಾತೆಗೆ ಪಾವತಿಸಲು ಕ್ರಮ ವಹಿಸಲಾಗುತ್ತಿದೆ. |
| ಈ) | ಅಮಾನತ್ತುಗೊಂಡ ಇಂಡಿಯನ್ ಒಲಿಂಪಿಕ್ ಅಸೋಸಿಯೇಷನ್ ಸದಸ್ಯರ ಗೈರು ಹಾಜರಿಯಲ್ಲಿ ಕರ್ನಾಟಕ ಒಲಿಂಪಿಕ್ ಅಸೋಸಿಯಷನ್ ಚುನಾವಣೆ ನಡೆಸಿರುವುದು ಸೂಕ್ತವೇ; ಇದ್ದಕ್ಕೆ ಯುವಜನ ಮತ್ತು ಕ್ರೀಡಾ ಇಲಾಖೆ ಮಾನ್ಯತೆ ನೀಡಿದೆಯೇ; (ಸಂಪೂರ್ಣ ವಿವರ ನೀಡಿದೆಯೇ) | ಇಂಡಿಯನ್ ಒಲಿಂಪಿಕ್ ಅಸೋಸಿಯೇಷನ್ ಅಮಾನತ್ತುಗೊಂಡಿರುವುದಿಲ್ಲ. ಕರ್ನಾಟಕ ಒಲಿಂಪಿಕ್ ಅಸೋಸಿಯೇಷನ್ ಕರ್ನಾಟಕ ಸಂಘಗಳ ನೋಂದಾವಣಿ ಕಾಯ್ದೆ 1960 ರಡಿ ಒಂದು ನೋಂದಾಯಿತ ಸಂಸ್ಥೆಯಾಗಿದ್ದು, ಸದರಿ ಸಂಸ್ಥೆಯು ತನ್ನ ಬೈಲಾ ಅನುಸಾರ ಚುನಾವಣೆ ಸೇರಿದಂತೆ ಎಲ್ಲಾ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲು ಅಧಿಕಾರವನ್ನು ಹೊಂದಿರುವ ಸ್ವಾಯತ್ತ ಸಂಸ್ಥೆಯಾಗಿದೆ. ಕರ್ನಾಟಕ ಒಲಿಂಪಿಕ್ ಸಂಸ್ಥೆಯು ಕರ್ನಾಟಕ ಕ್ರೀಡಾ ಪ್ರಾಧಿಕಾರ ಮತ್ತು ಇಂಡಿಯನ್ ಒಲಿಂಪಿಕ್ ಸಂಸ್ಥೆಯ ಮಾನ್ಯತೆ ಹೊಂದಿದೆ. |
| ಉ) | ಇತ್ತೀಚೆಗೆ ಕ್ರೀಡಾಪಟುಗಳಿಗೆ ಘೋಷಣೆ ಮಾಡಿರುವ ಪ್ರೋತ್ಸಾಹಧನ ಎಷ್ಟು; ಮತ್ತು ಎಷ್ಟು ಕ್ರೀಡಾಪಟುಗಳಿಗೆ ವಿತರಿಸಲಾಗಿದೆ? (ವಿವರ ನೀಡುವುದು) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ವಿವಿಧ ಕ್ರೀಡಾ ಸಾಧನೆಗಳಿಗೆ ನಗದು ಪುರಸ್ಕಾರವನ್ನು ನಿಗಧಿಪಡಿಸಿದ ವಿವರ |

| ಕ್ರಸ | ವಿವರ | ಚಿನ್ನ (ರೂ ಲಕ್ಷಗಳಲ್ಲಿ) | ಬೆಳ್ಳಿ (ರೂ ಲಕ್ಷಗಳಲ್ಲಿ) | ಕಂಚು (ರೂ ಲಕ್ಷಗಳಲ್ಲಿ) |
|---|---|---|---|---|
| 1 | ಒಲಂಪಿಕ್ಸ್ | 500.00 | 300.00 | 200.00 |
| 2 | ಏಷಿಯನ್ ಗೇಮ್ಸ್ | 25.00 | 15.00 | 8.00 |
| 3 | ಕಾಮನ್ ವೆಲ್ತ್ ಗೇಮ್ಸ್ | 25.00 | 15.00 | 8.00 |
| 4 | ವಿಶ್ವ ಕಪ್/ಚಾಂಪಿಯನ್‌ಶಿಪ್ (ಭಾರತ ಸರ್ಕಾರದಿಂದ ಅಂಗೀಕೃತವಾಗಿ ಭಾರತ ತಂಡದ ಭಾಗವಾಗಿ ಪ್ರತಿನಿಧಿಸಿರಬೇಕು) | 5.00 | 3.00 | 2.00 |
| 5 | ನ್ಯಾಷನಲ್ ಗೇಮ್ಸ್ (ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಕ್ರೀಡೆಗಳು) | 5.00 | 3.00 | 2.00 |
| 6 | ನ್ಯಾಷನಲ್ ಚಾಂಪಿಯನ್ ಶಿಪ್ (ಒಲಂಪಿಕ್ ಕ್ರೀಡೆಗಳಿಗೆ) | 2.00 | 1.00 | 0.50 |
| 7 | ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ) | 0.50 | 0.25 | 0.15 |
| 8 | ಸಬ್ ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ) | 0.25 | 0.15 | 0.10 |

1. 2022-23 ನೇ ಸಾಲಿನಲ್ಲಿ 206 ಸಾಧಕ ಕ್ರೀಡಾಪಟುಗಳಿಗೆ ರೂ 443.50 ಲಕ್ಷ ನಗದು ಪುರಸ್ಕಾರ ನೀಡಲಾಗಿದೆ.
2. 2022-23 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆಯಡಿ ಪರಿಶಿಷ್ಟ ಜಾತಿಯ 218 ಕ್ರೀಡಾಪಟುಗಳಿಗೆ ರೂ 334.00 ಲಕ್ಷ ಹಾಗೂ ಪರಿಶಿಷ್ಟ ಪಂಗಡದ 69

| | | |
|---|---|---|
| | | ಕ್ರೀಡಾಪಟುಗಳಿಗೆ ರೂ 97.00 ಲಕ್ಷಗಳನ್ನು ವಿಶೇಷ ನಗದು ಪುರಸ್ಕಾರವಾಗಿ ನೀಡಲಾಗಿದೆ.<br>3. 2022-23 ನೇ ಸಾಲಿನಲ್ಲಿ ಅಮೃತ ಕ್ರೀಡಾ ದತ್ತು ಯೋಜನೆಯಡಿ ಒಲಿಂಪಿಕ್ಸ್ ತಯಾರಿಗಾಗಿ 75 ಕ್ರೀಡಾಪಟುಗಳಿಗೆ ತಲಾ ರೂ 10.00 ಲಕ್ಷಗಳಂತೆ ರೂ 750.00 ಲಕ್ಷಗಳನ್ನು ನೀಡಲಾಗಿದೆ.<br>4. 2022-23 ನೇ ಸಾಲಿನಲ್ಲಿ ಸಹಸ್ರ ಕ್ರೀಡಾ ಪ್ರತಿಭಾ ಯೋಜನೆಯಡಿ ರಾಜ್ಯದ ಪ್ರತಿಭಾವಂತ 733 ಯುವ ಕ್ರೀಡಾಪಟುಗಳಿಗೆ ತಲಾ ರೂ 1.00 ಲಕ್ಷದಂತೆ ರೂ 733.00 ಲಕ್ಷಗಳನ್ನು ಪ್ರೋತ್ಸಾಹಧನವಾಗಿ ನೀಡಲಾಗಿದೆ.<br>5. 2022-23 ನೇ ಸಾಲಿನಲ್ಲಿ 315 ಸಾಧಕ ಕ್ರೀಡಾಪಟುಗಳಿಗೆ ರೂ 31.15 ಲಕ್ಷಗಳನ್ನು ಕ್ರೀಡಾ ವಿದ್ಯಾರ್ಥಿ ವೇತನವಾಗಿ ನೀಡಲಾಗಿದೆ.<br>6. 2022-23 ನೇ ಸಾಲಿನಲ್ಲಿ 387 ಕ್ರೀಡಾಪಟುಗಳಿಗೆ ರೂ 122.82 ಲಕ್ಷ ಮೊತ್ತದ ಶೈಕ್ಷಣಿಕ ಶುಲ್ಕವನ್ನು ಮರುಪಾವತಿ ಮಾಡಲಾಗಿರುತ್ತದೆ. |

**ವೈಎಸ್‌ಡಿ/ಇಬಿಬಿ/22/2023**

**(ಡಾ|| ಕೆ.ಸಿ. ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು.